**CC 1049/2022**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**

**ಸಿಸಿ ನಂಬರ್** 1049/2022

**ಸಿ ಡಬ್ಲ್ಯೂ -1**

**ಪಿ ಡಬ್ಲ್ಯೂ -1**

**ಸಾಕ್ಷಿಯ ಹೆಸರು - ಕಸ್ತೂರಿ**
**ತಂದೆಯ ಹೆಸರು - ಸುಂಕಪ್ಪ**
**ವಯಸ್ಸು -** 25 **ವರ್ಷಗಳು**
**ಉದ್ಯೋಗ - ಗೃಹಿಣಿ**
**ವಾಸಸ್ಥಳ - ಹೊಸಪೇಟೆ**

**ಸಾಕ್ಷಿಯನ್ನು ದಿನಾಂಕಃ** 09-07-2026 **ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎ. ಪಿ. ಪಿ. ಅವರಿಂದ**

ನನ್ನ ತಾಯಿ ಮತ್ತು ನಾನು ಮನೆಯ ಹತ್ತಿರ ತರಕಾರಿ ಮಾರುತ್ತಿದ್ದೇವು. ಹೊಲ್ ಸೇಲ್ ನಲ್ಲಿ ತರಕಾರಿ ತರಲು ಹೋದಾಗ ಆರೋಪಿ **2019** ರಲ್ಲಿ ನನಗೆ ಪರಿಚಯ ಆಗಿದ್ದ. ನನ್ನ ಮನೆಯಲ್ಲಿ ನನಗೆ ಮದುವೆ ಮಾಡಲು ಗಂಡು ಹುಡುಕುತ್ತಿದ್ದರು. ನಾನು ಆರೋಪಿಯನ್ನು ಇಷ್ಟ ಪಡುತ್ತಿದ್ದೇನೆ ಎಂದು ನನ್ನ ತಾಯಿಗೆ ತಿಳಿಸಿದ್ದೆ. ನಾವು ಕ್ರಿಶ್ಚಿಯನ್ ಧರ್ಮದವರಾಗಿದ್ದರಿಂದ ನನ್ನನ್ನು ಆರೋಪಿಗೆ ಕೊಟ್ಟು ಮದುವೆ ಮಾಡುವುದಿಲ್ಲವೆಂದು ನನ್ನ ತಾಯಿ ನನಗೆ ಮತ್ತು ಆರೋಪಿಗೆ ತಿಳಿಸಿದ್ದರು. ಆಗ ಆರೋಪಿ ತನ್ನ ಮನೆಯವರನ್ನು ಕರೆದುಕೊಂಡು ಬಂದು ಮನವೊಲಿಸಿದಾಗ ನನ್ನ ತಾಯಿ ಕ್ರಿಶ್ಚಿಯನ್ ಧರ್ಮದ ಪ್ರಕಾರ ಮದುವೆ ಮಾಡತಕ್ಕದ್ದು ಎಂದು ಹೇಳಿ ಮದುವೆಗೆ ಒಪ್ಪಿದ್ದರು. ಆದರೆ ಆರೋಪಿಯ ಮನೆಯವರು ಅದಕ್ಕೆ ಒಪ್ಪಿರಲಿಲ್ಲ. **6** ತಿಂಗಳ ನಂತರ ನನ್ನ ಮಾವನಿಗೂ ಸಹ ಆರೋಪಿ ಭೇಟಿಯಾಗಿ ನನ್ನನ್ನು ಮದುವೆಯಾಗುವುದಾಗಿ ತಿಳಿಸಿದ್ದ. ನನ್ನ ಮಾವ ಸಹ ಅದಕ್ಕೆ ಒಪ್ಪಿರಿಲಿಲ್ಲ.

ನಂತರದಲ್ಲಿ ಆರೋಪಿ ಹೊಸಲಿಂಗಾಪುರದ ಪಾಸ್ಟರ್ ಚಾಸಾ -12 ಮತ್ತು ಅವರ ಹೆಂಡತಿ ಚಾಸಾ -13 ರವರನ್ನು ಕರೆದುಕೊಂಡು ಒಂದು ಹೊಸ ಸೀರೆ ತೆಗೆದುಕೊಂಡು ಬಂದು ನನ್ನೊಂದಿಗೆ ನಿಶ್ಚಿತಾರ್ಥ ಮಾಡಕೊಳ್ಳಲು ಸಿದ್ದನಾಗಿದ್ದ. ನಮ್ಮ ಮನೆಯಲ್ಲಿ ನವೆಂಬರ್ 2019 ರಲ್ಲಿ ಸದರಿ ನಿಶ್ಚಿತಾರ್ಥ ಆಗಿತ್ತು. ಆರೋಪಿಯ ನಡುವಳಿಗೆ ಸರಿಯಲ್ಲ ಎಂದು ನನ್ನ ಮಾವ ನನಗೆ ತಿಳಿಸಿದ್ದರು. ಆಗ ನಾನು ಅವರು ತೋರಿಸಿದ ಹುಡುಗನನ್ನು ಮದುವೆ ಮಾಡಿಕೊಳ್ಳುವೆ ಎಂದು ತಿಳಿಸಿದ್ದೆ. ನಾನು ನಿಶ್ಚಿತಾರ್ಥದಲ್ಲಿ ಕೊಟ್ಟಿದ್ದ ಸೀರೆಯನ್ನು ಹಿಂತಿರುಗಿಸಿ ಮದುವೆ ಬೇಡ ಎಂದು ಹೇಳಿ ಬಂದಿದ್ದೆ. ಆಗ ಆರೋಪಿ ಪುನಃ ಬಂದು ನನ್ನ ಕಾಲಿಗೆ ಬಿದ್ದು ಮದುವೆ ಮಾಡಿಕೊಳಳಲು ಒಪ್ಪಿಸಿದ್ದ. ನಾನು ನನ್ನ ಮನೆಯವರಿಗೆ ಒಪ್ಪಿಸಿ ದಿಃ 07-10-2020 ರಂದು ಆರೋಪಿಯೊಂದಿಗೆ ಹೊಸಪೇಟೆಯ ಸುಬ್ರಮಣ್ಯ ನಗರದ ಮಾರನಾಥ್ ಚರ್ಚ್ ನಲ್ಲಿ ಮದುವೆಯಾಗಿರುತ್ತೇನೆ. ಸದರಿ ಮದುವೆಗೆ 2 ಕುಟುಂಬಗಳಿಂದ ತಲಾ ರೂ. 50,000/- ಗಳನ್ನು ಖರ್ಚು ಮಾಡಿದ್ದೇವು.

ಮದುವೆಯಾದ ನಂತರ ನನ್ನನ್ನು ಆರೋಪಿ ಹೊಸಲಿಂಗಾಪುರದ ಆತನ ಮನೆಗೆ ಕರೆದುಕೊಂಡ ಹೋಗಿದ್ದ. ಆರೋಪಿ ತಾನು ಕುಡಿಯುವುದಿಲ್ಲ ಎಂದು ಮಾತು ಕೊಟ್ಟು ನನ್ನೊಂದಿಗೆ ಮದುವೆ ಆಗಿ ಮದುವೆ ಆದ ನಂತರ ಕುಡಿದು ಮನೆಗೆ ಬರುವುದು ಮತ್ತು ಮನೆಗೆ ಸ್ನೇಹಿತರನ್ನು ಕರೆಯಕೊಂಡು ಬರುವುದು ಮತ್ತು ನನ್ನೊಂದಿಗೆ ಅಸಭ್ಯವಾಗಿ ನಡೆದುಕೊಂಡಿರುತ್ತಾನೆ. ಸದರಿ ವಿಷಯ ತಿಳಿದು ನನ್ನ ತಾಯಿ ಚಾಸಾ -4 ಮತ್ತು ನನ್ನ ಮಾವ ಚಾಸಾ -7 ರವರು ಹೊಸಲಿಂಗಾಪುರದ ಚಾಂದ್ ಬಾಷಾರವರಿಗೆ ತಿಳಿಸಿ ನನ್ನನ್ನು ಸೆಪ್ಟೆಂಬರ್ 2021 ರಲ್ಲಿ ಹೊಸಪೇಟೆ ಕರೆದುಕೊಂಡು ಬಂದಿದ್ದರು.

ನಾನು ಹೊಸಪೇಟೆಗೆ ಬಂದ ನಂತರ ಆರೋಪಿ ರಾತ್ರಿ ನಮ್ಮ ಮನೆಯ ಹತ್ತಿರ ಬರುವುದು, ಗಲಾಟೆ ಮಾಡುವುದು ಮಾಡಿರುತ್ತಾರೆ. ಒಂದು ಬಾರಿ ರಾತ್ರಿ **11.00** ಗಂಟೆಗೆ ಬಂದು ಮನೆಯ ಮೇಲೆ ಕಲ್ಲು ಎಸಗಿರುತ್ತಾರೆ. ಆರೋಪಿ ನನಗೆ ಬೊಸುಡಿ ಸೂಳೆ ಮತ್ತು ಇತರೆ ಕೆಟ್ಟ ಪದಗಳಿಂದ ಬೈದಿರುತ್ತಾನೆ. ಆ ದಿನ ಗಲಾಟೆ ಮಾಡಿ, ಮರುದಿನ ಪುನಃ ಬೆಳಿಗ್ಗೆ ಬಂದು ಆರೋಪಿ ಮತ್ತು ಆತನ ತಾಯಿ ಯಲ್ಲಮ್ಮ ಗಲಾಟೆ ಮಾಡಿದ್ದರಿಂದ ನಾನು ಠಾಣೆಗೆ ಹೋಗಿದ್ದೆ.  ಠಾಣೆಯಿಂದ ಹಿಂತಿರುಗಿದಾಗ ಪುನಃ ಆರೋಪಿ ದೂರು ನೀಡಲು ಹೋಗುತ್ತಿಯಾ ಎಂದು ನನ್ನೊಂದಿಗೆ ಜಗಳ ತೆಗೆದಿದ್ದ. ನಾನು ಮಾರುಕಟ್ಟೆಗೆ ತರಕಾರಿ ತರಲು ಹೋದಾಗ ಆರೋಪಿ ಮತ್ತು ಆತನ ತಾಯಿ ನನಗೆ ಇತಂಹ ಸೂಳೆನಯೊಂದಿಗೆ ಹೇಗೆ ಜೀವನ ಮಾಡಬೇಕು ಎಂದು ಕೆಟ್ಟದಾಗಿ ಬೈದಿರುತ್ತಾರೆ. ಆರೋಪಿ ದೂರು ನೀಡುತ್ತೀರಾ ಎಂದು ಪುನಃ ನನ್ನ ಮನೆಯ ಹತ್ತಿರ ಬಂದು ನನಗೆ ಮತ್ತು ನನ್ನ ತಾಯಿಗೆ ಜೀವ ಬೆದರಿಕೆ ಹಾಕಿ ಹೋಗಿದ್ದ. ಆರೋಪಿಯ ತಾಯಿ ಮತ್ತು ಆತನ ಸ್ನೇಹಿತ ಗುರುರಾಜ ಬಂದು ಕೇಳಿಕೊಂಡಿದ್ದರಿಂದ ನಾನು ಆರೋಪಿಯೊಂದಿಗೆ ಒಂದು ಬಾಡಿಗೆ ಮನೆಯಲ್ಲಿ ಒಂದು ವಾರ ಇದ್ದೆ. ಸದರಿ ಮನೆಯಲ್ಲಿ ಆರೋಪಿ ನನ್ನೊಂದಿಗೆ ಸಂಸಾರ ಮಾಡದೇ ಹೋಗಿರುತಾತನೆ.

ದಿಃ **20-02-2022** ರಂದು ನಾನು ಹೊಸಪೇಟೆಯ ಪಟ್ಟಣ ಪೋಲಿಸ್ ಠಾಣೆಯಲ್ಲಿ ದೂರನ್ನು ನೀಡಿರುತ್ತೇನೆ. ಸದರಿ ದೂರನ್ನು ಪೋಲಿಸರು ತೆಗೆದುಕೊಳ್ಳಲಿಲ್ಲ. ನಂತರ ನಾನು ಪೋಲಿಸ್ ವರಿಷ್ಟಾಧಿಕಾರಿಗಳ ಕಚೇರಿಗೆ ಹೋಗಿ ದೂರನ್ನು ಸಲ್ಲಿಸಿದ್ದೆ. ಅದಾದ ನಂತರ ಪೋಲಿಸರು ನನ್ನಿಂದ ದೂರನ್ನು ಪಡೆದಿರುತ್ತಾರೆ. ಸದರಿ ದೂರನ್ನು ಅನ್ನು ನೋಡಿದರೆ ಗುರುತಿಸುತ್ತೆನೆ. ಸಾಕ್ಷಿ ದೂರು ನೋಡಿ ಗುರುತಿಸಿದ್ದು, ಅದನ್ನು ದಿಃ **05-03-2022** ರಂದು ನೀಡಿರುತ್ತೇನೆ

ಎಂದು ನುಡಿದಿರುತ್ತಾರೆ. ಸದರಿ ದೂರನ್ನು ನಿಪಿಃ **1** ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿಃ **1(ಎ)** ಎಂದು ಗುರುತಿಸಲಾಯಿತು.

ದೂರು ನೀಡಿದ ನಂತರ ದಿಃ **06-03-2022** ರಂದು ಪೋಲಿಸರು ನನ್ನ ಮನೆಯ ಹತ್ತಿರ ಬಂದು ಪಂಚನಾಮೆಯನ್ನು ಮಾಡಿರುತ್ತಾರೆ. ಸದರಿ ಪಂಚನಾಮೆ ಅನ್ನು ನೋಡಿದರೆ ಗುರುತಿಸುತ್ತೆನೆ. ಸಾಕ್ಷಿ ಪಂಚನಾಮೆ ನೋಡಿ ಗುರುತಿಸಿದ್ದು, ಅದನ್ನು ನಿಪಿಃ **2** ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿಃ **2(ಎ)** ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯನ್ನು ಬೆಳಿಗ್ಗೆ **10.30** ರಿಂದ **12.00** ಗಂಟೆ ವರೆಗೆ ಮಾಡಿರುತ್ತಾರೆ.

ಈಗ ನಾನು ನೋಡುತ್ತಿರುವ ಪೋಟೋದಲ್ಲಿನ ವ್ಯಕ್ತಿ ನಾನೇ ಇರುತ್ತೇನೆ. ಸದರಿ ಪೋಟೋವನ್ನು ನಿಪಿಃ **3** ಎಂದು ಗುರುತಿಸಲಾಯಿತು. ಸದರಿ ಪೋಟೊ ಪಂಚನಾಮೆ ಕಾಲಕ್ಕೆ ತೆಗೆದಿರುತ್ತಾರೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಮಾನ್ಯ ಎ.ಪಿ.ಪಿ. ಅವರು ಅನುಮತಿ ಕೇಳಿದ್ದು, ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲು ಮಾನ್ಯ ಎ ಪಿ ಪಿ ಅವರಿಂದಃ**

ಆರೋಪಿ ತನ್ನ ಸ್ನೇಹಿತರನ್ನು ಮನೆಗೆ ಕರೆದುಕೊಂಡು ಬಂದು ಮನೆಯಲ್ಲಿ ಬಿಟ್ಟು ನಾನು ಅವರೊಂದಿಗೆ ಇರಬೇಕು ಎಂದು ಒತ್ತಾಯಿಸುತ್ತಿದ್ದ ಅಂದರೆ ಸರಿ. ಆರೋಪಿ ಮತ್ತು ಆತನ ತಾಯಿ ನಮ್ಮ ಮನೆಯ ಹತ್ತಿರ ಗಲಾಟೆ ಮಾಡಿ ಹೋದ ನಂತರ ನಾನು ಠಾಣೆಗೆ ಹೋಗಿ ದೂರು ನೀಡಿದಾಗ ಆರೋಪಿ ನನಗೆ ದಿಃ 15-02-2022 ರಂದು ಸಂಸಾರ ಮಾಡಲು ಬನ್ನಿ ಎಂದು ನೋಟಿಸ್ ನೀಡಿದ್ದ ಅಂದರೆ ಸರಿ. ಸದರಿ ನೋಟಿಸ್ ನೀಡಿದ ನಂತರ ಆರೋಪಿ ದಾಂಪತ್ಯ ಜೀವನ ನಡೆಸಲು

ಬರದಿದ್ದರೆ ಜೀವ ಸಹಿತ ಬಿಡುವುದಿಲ್ಲ ಎಂದು ನನಗೆ ಮತ್ತು ಚಾಸಾ -4 ರವರೆಗ ಬೆದರಿಕೆ ಹಾಕಿದ್ದ ಅಂದರೆ ಸರಿ. ದಿಃ 20-02-2022 ರಂದು ಆರೋಪಿ ರಾತ್ರಿ 11.00 ಗಂಟೆಗೆ ಚಾಸಾ -5 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿದ್ದ ಅಂದರೆ ಸರಿ. ಆಗ ಚಾಸಾ -9 ಮತ್ತು 10 ರವರು ಸದರಿ ಘಟನೆ ನೋಡಿದ್ದರು ಅಂದರೆ ಸರಿ. ದಿಃ 25-02-2022 ರಂದು ನಾನು ದೂರು ನೀಡಿದಾಗ ಅದನ್ನು ಅರ್ಜಿ ಸಂಖ್ಯೆ 138/2022 ರಲ್ಲಿ ನೊಂದಾಯಿಸಿಕೊಂಡು ಪೋಲಿಸರು ದಿಃ 07-03-2022 ರಂದು ಹಾಜರಾಗುವಂತೆ ತಿಳಿಸಿದ್ದರು ಅಂದರೆ ಸರಿ.

ನಾನು ನ್ಯಾಯಾಧೀಶರ ಮುಂದೆ ಹೇಳಿಕೆ ನೀಡಿದ್ದೆ ಅಂದರೆ ಸರಿ. ಈಗ ನಾನು ನೋಡುತ್ತಿರುವ ಹೇಳಿಕೆಗಳು ಅವೇ ಆಗಿರುತ್ತವೆ ಅಂದರೆ ಸರಿ. ಸಾಕ್ಷಿ **2** ಹೇಳಿಕೆಗಳನ್ನು ನೋಡಿ ಗುರುತಿಸಸಿದ್ದು, ಅವುಗಳನ್ನು ನಿಪಿಃ **4** ಮತ್ತು **5** ಎಂದು ಗುರುತಿಸಲಾಯಿತು.

## ಪಾಟೀ ಸವಾಲು ಆರೋಪಿ ಪರ ಶ್ರೀ ಆರ್ ಸಿ ಎನ್ (ಎ ಎಲ್ ಎ ಡಿ ಸಿ ) ವಕೀಲರಿಂದಃ

ಆರೋಪಿ ನನಗೆ **2019** ರಿಂದ ಪರಿಚಯ. ನಾನು ಮತ್ತು ಆರೋಪಿ ಮದುವೆಗು ಮೊದಲು **2** ವರ್ಷಗಳಿಂದ ಪ್ರೀತಿಸುತ್ತಿದ್ದೇವು. ಸದರಿ **2-3** ವರ್ಷಗಳ ಕಾಲದಲ್ಲಿ ಆರೋಪಿ ನನ್ನ ಮನೆಗೆ ಬಂದು ಹೋಗಿರುತ್ತಾನೆ ಅಂದರೆ ಸರಿ. ಆರೋಪಿಯ ಹವ್ಯಾಸಗಳು ನನಗೆ ತಿಳಿದಿದ್ದವು ಅಂದರೆ ಸರಿ. ನನ್ನ ಮತ್ತು ಆರೋಪಿಯ ಮದುವೆ ಪ್ರೇಮವಿವಾಹ ಅಂದರೆ ಸರಿ.

ಮದುವೆ ಆದ ನಂತರ **8** ತಿಂಗಳ ಕಾಲ ಆರೋಪಿಯ ಮನೆಯಲ್ಲೇ ಸಂಸಾರ ಮಾಡುತ್ತಿದ್ದೆ. ಸದರಿ ಮನೆಯಲ್ಲಿ ಆರೋಪಿ ಮತ್ತು ನಾನು ಮಾತ್ರ ವಾಸವಿದ್ದೇವು. ಸಾಕ್ಷಿ ಮುಂದುವರೆದು ಅತ್ತೆ ಮಾವ ಬಂದು ಹೋಗುತ್ತಿದ್ದರು ಎಂದು

ನುಡಿಯುತ್ತಾರೆ. ಆರೋಪಿಯ ಸಾಕು ತಂದೆ ಮತ್ತು ತಾಯಿ ಆ ರೀತಿ ಬಂದು ಹೋಗುತ್ತಿದ್ದರು ಅಂದರೆ ಸರಿ. ಸದರಿಯವರೊಂದಿಗೆ ನಾನು ಮಾತನಾಡುತ್ತಿರಲಿಲ್ಲ.

ನನ್ನ ಮದುವೆಗೆ ನಮ್ಮ ಕಡೆಯಿಂದ ನನ್ನ ತಾಯಿ, ನನ್ನ ಮಾವ, ನನ್ನ ಅಕ್ಕ ಮತ್ತು ಬಂದು ಬಳಗದವರು ಬಂದಿದ್ದರು. ಮದುವೆಯ ಊಟದ ಖರ್ಚನ್ನು ಆರೋಪಿಯೇ ನೋಡಿಕೊಂಡಿದ್ದ ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಮ್ಮ ಕುಟುಂಬ ಮತ್ತು ಆರೋಪಿಯ ಕುಟುಂಬ ಸಮನಾಗಿ ಖರ್ಚನ್ನು ನೋಡಿಕೊಂಡಿದ್ದರು ಎಂದು ನುಡಿಯುತ್ತಾರೆ.

ಮದುವೆಯಾಗಿ ಆರೋಪಿಯೊಂದಿಗೆ ಇದ್ದ **8** ತಿಂಗಳ ಅವಧಿಯಲ್ಲಿ ಜಗಳ ಆಗಿದ್ದವು ಅದಕ್ಕೆ ಸಂಬಂಧಿಸಿ **2-3** ಬಾರಿ ಪಂಚಾಯಿತಿ ಮಾಡಿದ್ದರು. ನಾನು ಹೊಸಲಿಂಗಾಪುರದಲ್ಲಿ ಆರೋಪಿಯ ವಿರುದ್ಧ ದೂರು ನೀಡಿರಲಿಲ್ಲ. ಸಾಕ್ಷಿ ಮುಂದುವರೆದು ನಾನು ಒಬ್ಬಳೇ ಇದ್ದುದ್ದರಿಂದ ನಾನು ಠಾಣೆಗೆ ಹೋಗಿಲ್ಲ ಎಂದು ನುಡಿಯುತ್ತಾರೆ. ಪಂಚಾಯಿತಿ ಅಕ್ಟೋಬರ್ **2021** ರಲ್ಲಿ ಮಾಡಿರುತ್ತಾರೆ. ನಂತರ ಯಾವಾಗ ಪಂಚಾಯಿತಿ ಆಗಿದ್ದವು ಎಂದು ನನಗೆ ನೆನಪಿಲ್ಲ. ಪಂಚಾಯಿತಿ ಮಾಡಲು ಗುರುರಾಜ ಮತ್ತು ಆರೋಪಿಯ ಸಾಕು ತಾಯಿ ಯಲ್ಲಮ್ಮ ಮಾಡಿದ್ದರು. ಸದರಿ ಅಂಶವನ್ನು ಬರೆದಿಲ್ಲ ಅಂದರೆ ಸರಿ.

ನಾನು ಆರೋಪಿಯೊಂದಿಗೆ **8** ತಿಂಗಳು ಸಂಸಾರ ಮಾಡಿದ ನಂತರ ನನ್ನ ತಾಯಿಯ ಮನೆಗೆ ನನ್ನ ತಾಯಿಯೇ ಕರೆದುಕೊಂಡು ಬಂದಿದ್ದರು. ನನ್ನ ತಾಯಿಯ ಮನೆಗೆ ಬಂದ ನಂತರ ದಿಃ **15-02-2022** ರಂದು ಆರೋಪಿ ವೈವಾಹಿಕ ಜೀವನ ನಡೆಸಲು ಬನ್ನಿ ಎಂದು ನನಗೆ ನೋಟಿಸ್ ನೀಡಿದ್ದ ಅಂದರೆ ಸರಿ. ಸದರಿ ನೋಟಿಸ್ ತಲುಪಿದ ನಂತರ ನಾನು ಆರೋಪಿಯ ಮನೆಗೆ ಸಂಸಾರ ಮಾಡಲು ಹೋಗಲಿಲ್ಲ. ಸಾಕ್ಷಿ ಮುಂದುವರೆದು ಆರೋಪಿ ನನ್ನೊಂದಿಗೆ ಈ ಮೊದಲು ಸರಿಯಾಗಿ ವರ್ತಿಸಿರಲಿಲ್ಲ ಹಾಗಾಗಿ ನಾನು ಹೋಗಿಲ್ಲ ಎಂದು ನುಡಿಯುತ್ತಾರೆ.

ನಾನು ಆರೋಪಿ ಸರಿಯಾಗಿ ನೋಡಿಕೊಂಡಿಲ್ಲ ಎಂದು ಸದರಿ ನೋಟಿಸ್ ಗೆ ಉತ್ತರ ನೀಡಿರುತ್ತೇನೆ. ನನ್ನ ವಕೀಲರ ಮೂಲಕ ಸದರಿ ನೋಟಿಸ್ ನೀಡಿರುತ್ತೇನೆ. 2022 ರಲ್ಲಿಯೇ ಉತ್ತರ ನೋಟಿಸ್ ನೀಡಿರುತ್ತೇನೆ. ಪೋಲಿಸರಿಗೆ ಸದರಿ ನೋಟಿಸ್ ನ ಪ್ರತಿಯನ್ನು ನೀಡಿರುತ್ತೇನೆ.

ಹೊಸಪೇಟೆಯಲ್ಲಿ ನನ್ನ ತಾಯಿಯ ಮನೆಯ ಹತ್ತಿರವೇ ಬಾಡಿಗೆ ಮನೆಯನ್ನು ನಾನು ಹುಡುಕಿದ್ದೆ ಅಂದರೆ ಸರಿ. ಸಾಕ್ಷಿ ಮುಂದುವರೆದು ಆರೋಪಿ ಸಹ ಮನೆ ಹುಡುಕಿದ್ದರು ಎಂದು ನುಡಿಯುತ್ತಾರೆ. ಆರೋಪಿಗೆ ನಾನು ಆತನ ಮನೆಗೆ ಬರುವುದಿಲ್ಲ, ಹೊಸಪೇಟೆಯಲ್ಲಿಯೆ ಮನೆ ಮಾಡು ಎಂದು ಒತ್ತಾಯಿಸಿದ್ದರಿಂದ ಹೊಸಪೇಟೆಯಲ್ಲಿ ಮನೆ ಮಾಡಬೇಕಾಯಿತು ಅಂದರೆ ಸರಿಯಲ್ಲ.

ಆರೋಪಿ ನಿಂಬೆಹಣ್ಣಿನ ವ್ಯಾಪಾರ ಮಾಡುತ್ತಾನೆ. ಆರೋಪಿ ಮಾಸಿಕ ರೂ. 30,000/- ಪಡೆಯುತ್ತಾನೆ. ಸದರಿ ಮನೆಗೆ ರೂ. 10,000/- ಮುಂಗಡ ಹಣವನ್ನು ಆರೋಪಿಯೇ ಕೊಟ್ಟಿದ್ದ. ಮನೆಯ ಬಾಡಿಗೆ ರೂ. 2000/- ನಿಗದಿಪಡಿಸಲಾಗಿತ್ತು. ಆರೋಪಿಯೇ ಬಾಡಿಗೆ ಕಟ್ಟಿದ್ದ ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆ ಮನೆಯಲ್ಲಿ ಒಂದು ವಾರ ಸಹ ಇರಲಿಲ್ಲ ಎಂದು ನುಡಿಯುತ್ತಾರೆ.

ಹೊಸಲಿಂಗಾಪುರದ ಮನೆಯಲ್ಲಿ ಕರೆದುಕೊಂಡು ಬಂದಿದ್ದ ಎನ್ನಲಾದ ಆತನ ಸ್ನೇಹಿತರ ಹೆಸರು ಮತ್ತು ವಿಳಾಸಗಳು ನನಗೆ ಗೊತ್ತಿಲ್ಲ. 4 ಜನ ಸ್ನೇಹಿತರು ಬಂದಿದ್ದರು ಯಾವ ದಿನ ಬಂದಿದ್ದರು ನನಗೆ ಗೊತ್ತಿಲ್ಲ. ಆ ರೀತಿ ಒಂದು ಬಾರಿ ಸದರಿಯವರು ಬಂದಿದ್ದರು. ಆರೋಪಿ ಆ ರೀತಿ ಸದರಿ ಸ್ನೇಹಿತರೊಂದಿಗೆ ನನಗೆ ಇರಲು ಹೇಳಿದ್ದ ಎಂದು ನಾನು ದೂರು ನೀಡಿರಲಿಲ್ಲ. ಸಾಕ್ಷಿ ಮುಂದುವರೆದು ಜೀವ ಭಯ ಇರುವುದರಿಂದ ನಾನು ಹೇಳಿದ್ದಿಲ್ಲ ಎಂದು ನುಡಿಯುತ್ತಾರೆ. ನ್ನ್ನ ತಾಯಿಯ ಮನೆಗೆ ಬಂದ ನಂತರ ಆರೋಪಿ ಆ ರೀತಿ ನಡೆದುಕೊಂಡಿದ್ದ ಮತ್ತು

ನನಗೆ ಜೀವ ಬೆದರಿಕೆ ಇರುತ್ತದೆ ಎಂದು ನಾನು ದೂರು ನೀಡಿರುತ್ತೇನೆ. ಆ ರೀತಿ ಸತತವಾಗಿ **3** ತಿಂಗಳ ಕಾಲ ದೂರು ನೀಡಿರುತ್ತೇನೆ. ಆ ರೀತಿ **3-4** ಬಾರಿ ಠಾಣೆಗೆ ಹೋಗಿ ದೂರು ನೀಡಿರುತ್ತೇನೆ. ದೂರಿನ ಪ್ರತಿಗಳನ್ನು ಈ ಪ್ರಕರಣದ ದೂರು ನೀಡಿದಾಗ ಪೋಲಿಸರಿಗೆ ನೀಡಿಲ್ಲ. ಸಾಕ್ಷಿ ಮುಂದುವರೆದು ನಾನು ಮೊದಲು ನೀಡಿದ್ದ ದೂರನ್ನು ಪೋಲಿಸರು ಪಡೆದಿರಲಿಲ್ಲ ಎಂದು ನುಡಿಯುತ್ತಾರೆ. ದೂರು ಪಡೆದಿಲ್ಲ ಎಂದು ನಾನು ಅಂಚೆ ಮೂಲಕ ಸದರಿ ದೂರನ್ನು ಮೇಲಾಧಿಕಾರಿಗಳಿಗೆ ಕಳುಹಿಸಿರುವುದಿಲ್ಲ. ಸದರಿ ಅಂಚೆ ಮೂಲಕ ದೂರು ನೀಡಲು ತೊಂದಿರೆ ಇರಲಿಲ್ಲ ಅಂದರೆ ಸರಿ.

ಹೊಸಲಿಂಗಾಪುರದ ಕೌನ್ಸಿಲರ್ ಹೆಸರು ಚಾಂದ್ ಬಾಷಾ ಎಂದು ಇರುತ್ತದೆ. ದೂರಿನಲ್ಲಿ ನನ್ನ ತಾಯಿ ಸದರಿ ಕೌನ್ಸಿಲರ್ ಗೆ ಹೇಳಿ ನನ್ನನ್ನು ಕರೆದುಕೊಂಡು ಹೋಗಿರುತ್ತಾರೆ ಎಂದು ಬರೆಸಿಲ್ಲ ಅಂದರೆ ಸರಿ. ನಾನು ದೂರಿನಲ್ಲಿ ಆರೋಪಿ ನನ್ನ ಕಾಲಿಗೆ ಬಿದ್ದು ಮದುವೆಗೆ ಒಪ್ಪಿಸಿದ್ದ ಎಂದು ಬರೆಸಿರುವುದಿಲ್ಲ. ಆರೋಪಿ ನಮ್ಮ ಮನೆಯ ಹತ್ತಿರ ನನಗೆ, ನನ್ನ ತಾಯಿಗೆ ಮತ್ತು ನನ್ನ ಅಕ್ಕಳಿಗೆ ಬೈದಾಗಲೆಲ್ಲಾ ದೂರು ನೀಡಿರುತ್ತೇನೆ.

ಚಾಸಾ **-2** ಕ್ರಿಶ್ಚಿಯನ್ ಧರ್ಮದವರು ಅಂದರೆ ಸರಿ. ಸದರಿಯವರು ಸಂಬಂದದಲ್ಲಿ ನನಗೆ ಅಣ್ಣ ನಾಗಬೇಕು. ಚಾಸಾ **-3** ರವರು ಮೊದಲಿನಿಂದಲೂ ನನ್ನ ತಾಯಿಗೆ ಪರಿಚಯಸ್ಥರು ಅಂದರೆ ಸರಿ. ಚಾಸಾ **-4** ನನ್ನ ತಾಯಿ, ಚಾಸಾ **-5** ಮತ್ತು **6** ನನ್ನ ಅಕ್ಕಂದಿರು, ಚಾಸಾ **-7** ನನ್ನ ಮಾವ ಅಂದರೆ ಸರಿ. ಚಾಸಾ **-8** ನಮ್ಮ ಜನಾಂಗದವರು ಅಂದರೆ ಸರಿ. ಸದರಿಯವರು ನನ್ನ ಸಂಬಂಧಿಕರಲ್ಲ.

ನಾನು ಮಾರಾನಾಥ್ ಚರ್ಚ್‌ಗೆ ಹೋಗುತ್ತೇನೆ. ಚಾಸಾ **-11** ಸದರಿ ಚರ್ಚಿನವರು ಅಂದರೆ ಸರಿ.  ಚಾಸಾ **-12** ಬೇರೆ ಚರ್ಚಿನವರು. ಚಾಸಾ **-15** ಆರೋಪಿಯ ಸ್ನೇಹಿತ. ದೂರಿನಲ್ಲಿ ಆರೋಪಿ ಯಾವ ಯಾವ ಅವಾಚ್ಯ

ಶಬ್ದಗಳಿಂದ ಬೈಯುತ್ತಿದ್ದ ಎಂದು ಬರೆಸಿರುವುದಿಲಅಲ ಅಂದರೆ ಸರಿಯಲ್ಲ. ಆರೋಪಿ ದೈಹಿಕ ಹಿಂಸೆ ನೀಡಿದಾಗ ಸುಮಾರು **4** ಬಾರಿ ಆಸ್ಪತ್ರೆಗೆ ಹೋಗಿರುತ್ತೇನೆ. ಆಸ್ಪತ್ರೆಗೆ ಹೋಗಿ ಬಂದಿದ್ದ ದಾಖಲೆಗಳನ್ನು ಪೋಲಿಸರಿಗೆ ನೀಡಿಲ್ಲ. ನನಗೆ ತಲೆಗೆ ಪೆಟ್ಟು ಬಿದ್ದಿತ್ತು. ಪೋಲಿಸರಿಗೆ ಸದರಿ ತಲೆಗೆ ಪೆಟ್ಟು ಬಿದ್ದಿದ್ದ ಗಾಯಕ್ಕೆ ಸಂಬಂಧಿಸಿದ ದಾಖಲೆಗಳನ್ನು ನೀಡಿಲ್ಲ.

ಆರೋಪಿ ಹೊಸಲಿಂಗಾಪುರದಲ್ಲಿ ಇದ್ದಾಗ ಮನೆ ಬಿಟ್ಟು ಹೋಗು ಎಂದು ಯಾವತ್ತು ಹೇಳಿಲ್ಲ ಅಂದರೆ ಸರಿ. ಮದುವೆಗೂ ಮೊದಲು ಆರೋಪಿ ನನ್ನ ತಾಯಿಗೆ ಮನೆ ಕಟ್ಟಲು ಹಣ ನೀಡಿದ್ದ ಅಂದರೆ ಸರಿಯಲ್ಲ. ಮದುವೆ ಆದ ನಂತರ ಆರೋಪಿ ನನಗೆ ಬಂಗಾರದ ಕಿವಿ ಓಲೆ ಕೊಡಿಸಿದ್ದ ಅಂದರೆ ಸರಿಯಲ್ಲ. ಆರೋಪಿ ಆತನ ಸ್ನೇಹಿತರನ್ನು ಕರೆದುಕೊಂಡು ಬಂದಿದ್ದರಿಂದ ನನಗೆ ಮಾನಸಿಕ ಹಿಂಸೆ ಆಗಿತ್ತು. ನಾನು ಆರೋಪಿಯೊಂದಿಗೆ ಬಾಡಿಗೆ ಮನೆಯಲ್ಲಿ ಇದ್ದಾಗ ನಾನು ಕೆಲಸಕ್ಕೆ ಹೋಗಿಲ್ಲ. ನಾನು ಟಿ ವಿ ಎಸ್ ಶೋರೂಂ ಗೆ ಕೆಲಸಕ್ಕೆ ಹೋಗುತ್ತೇನೆ ಅಂದರೆ ಸರಿ. ಸದರಿ ಶೋರೂಂ ನಲ್ಲಿ ಎಷ್ಟು ಜನ ಗಂಡಸರು ಕೆಲಸ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಶೋರೂಂ ನಲ್ಲಿ ಕೆಲಸ ಮಾಡುವ ನನ್ನ ಸ್ನೇಹಿತನೊಬ್ಬ ನನ್ನನ್ನು ಮನೆಗೆ ಡ್ರಾಪ್ ಮಾಡುತ್ತಿದ್ದ ಅಂದರೆ ಸರಿಯಲ್ಲ. ನಾನು ಮತ್ತು ಆರೋಪಿ ಬಾಡಿಗೆ ಮನೆಯಲ್ಲಿದ್ದಾಗ ಆರೋಪಿ ನನ್ನ ಸದರಿ ಸ್ನೇಹಿತನೊಂದಿಗೆ ಜಗಳ ಮಾಡಿದ್ದ ಅಂದರೆ ಸರಿಯಲ್ಲ.  ನಾನು ಪ್ರತಿನಿತ್ಯ ಕೆಲಸಕ್ಕೆ ಮೊದಲು ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದೆ ಈಗ ನಡೆದುಕೊಂಡು ಹೋಗುತ್ತಿದ್ದೇನೆ. ಸದರಿ ಶೋರೂಂಮ ನನ್ನ ಮನೆಯಿಂದ **3** ಕಿಮೀ ಅಂತರದಲ್ಲಿ ಇರುತ್ತದೆ. ನಾನು ಸದರಿ ಶೋರೂಂ ನಿಂದ ನನ್ನ ಸ್ನೇಹಿತನ ವಾಹನದಲ್ಲಿ ಡ್ರಾಪ್ ತೆಗೆದುಕೊಳ್ಳುತ್ತಿದ್ದೆ ಅಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಶೋರೂಮನಲ್ಲಿ ಕೆಲಸ

ಮಾಡುವವರು ಡ್ರಾಪ್ ಮಾಡಿದರೂ ಆರೋಪಿ ಅನುಮಾನ ಪಡುತ್ತಿದ್ದ ಎಂದು ನುಡಿಯುತ್ತಾರೆ. ನಾನು ಸದರಿ ಶೋರೂಂ ನಲ್ಲಿ ಕಂಪ್ಯೂಟರ್ ಕೆಲಸ ಮಾಡುತ್ತೇನೆ.

ಆರೋಪಿಯ ವಿರುದ್ದ ಜೀವನಾಂಶ ಕೋರಿ ಪ್ರಕರಣ ದಾಖಲಿಸಿರುತ್ತೇನೆ ಅಂದರೆ ಸರಿ. ಸದರಿ ಜೀವನಾಂಶ ಪ್ರಕರಣಕ್ಕೆ ಅನುಕೂಲವಾಗಲೀ ಎಂದು ಈ ಪ್ರಕರಣ ದಾಖಲಿಸಿರುತ್ತೇನೆ ಅಂದರೆ ಸರಿ. ಆರೋಪಿ ನನ್ನೊಂದಿಗೆ ಇರಲು ಬಯಸಿ ನನಗೆ ನೋಟಿಸ್ ನೀಡಿದ್ದ ಅಂದರೆ ಸರಿಯಲ್ಲ. ನಾನು ಕೆಲಸಕ್ಕೆ ಬೆಳಿಗೆಗ 9.30 ಹೋಗಿ ಸಂಜೆ 7.00 ಗಂಟೆಗೆ ಹಿಂತಿರುಗಿರುತ್ತೇನೆ. ನಾನು ಈ ದಿನ ಕೆಲಸಕ್ಕೆ ಹೋಗಿ ಬಂದಿರುತ್ತೇನೆ. ನನ್ನ ಜೀವಕ್ಕೆ ಭಯ ಇತ್ತು ಎಂದು ಪೋಲಿಸರಿಗೆ ದೂರು ನೀಡಿದ್ದೆ. ನಾನು ದೂರು ನೀಡಲು ಹೋದಾಗ ಚಾಸಾ -7 ರವರು ಬಂದಿದ್ದರು ಅಂದರೆ ಸರಿ. ದೂರು ನೀಡಲು ನಾನು, ನನ್ನ ತಾಯಿ ಮತ್ತು ನನ್ನ ಮಾವ ಮಾಹಿತಿ ನೀಡಿರುತ್ತೇವೆ. ನನ್ನ ತಾಯಿ ಮತ್ತು ಅಕ್ಕ ಆರೋಪಿಯ ವಿರುದ್ದ ಪ್ರತ್ಯೇಕವಾಗಿ ದೂರನ್ನು ಸಲ್ಲಿಸಿಲ್ಲ. ಪೋಲಿಸರಿಗೆ ದೂರನ್ನು ಬರೆದುಕೊಟ್ಟಿದ್ದೆ. ಸದರಿ ದೂರು **2-3** ಪೇಜ್ ಇತ್ತು. ನಾನೊಬ್ಬಳೇ ಸಹಿ ಮಾಡಿದ್ದೆ. ನ್ನ್ನ ದೂರಿನಲ್ಲಿರುವ, ನನ್ನ ಹೇಳಿಕೆಯಲ್ಲಿ ಮತ್ತು ಅಂತಿಮ ವರದಿಯಲ್ಲಿರುವ ಅಂಶಗಳು ಬೇರೆ ಬೇರೆ ಇರುತ್ತವೆ ಅಂದರೆ ಸರಿಯಲ್ಲ. ಪಂಚನಾಮೆಯನ್ನು ದಿಃ **06-03-2022** ರಂದು ನಮ್ಮ ಮನೆಯಲ್ಲಿ ಮಾಡಿರುತ್ತಾರೆ. ಪಂಚನಾಮೆಗೆ **3** ಜನ ಪೋಲಿಸರು ಬಂದಿದ್ದರು. ನನ್ನೊಂದಿಗೆ ರೆಹಮಾನ್ ಶೇಕ್ ಮತ್ತು ದೇವೆಂದ್ರರು ಇದ್ದರು. ಸದರಿಯವರು ನಮ್ಮ ಮನೆಯ ಹತ್ತಿರವೇ ಇರುವುದರಿಂದ ಪಂಚನಾಮೆಗೆ ಬಂದಿದ್ದರು. ಪಂಚನಾಮೆಗೆ ನಾನು, ನನ್ನ ತಾಯಿ ಮತ್ತು ಪಂಚರಿಬ್ಬರು ಮಾಡಿರುತ್ತೇವೆ. ನಾನು ಒಂದು ಸಹಿ ಮಾಡಿರುತ್ತೇನೆ.

ನಿಪಿಃ 3 ರ ಫೋಟೋವನ್ನು ಮೊಬೈಲ್ ನಲ್ಲಿ ತೆಗೆದಿರುತ್ತಾರೆ. ಸದರಿ ಫೊಟೋವನ್ನು ಚಾಸಾ -21 ರವರ ಮೊಬೈಲ್ ನಲ್ಲಿ ತೆಗೆಯಲಾಗಿದೆ. ಪಂಚನಾಮೆಯನ್ನು ನನ್ನ ಮನೆಯಲ್ಲಿಯೇ ಲ್ಯಾಪ್ ಟಾಪ್ ನಲ್ಲಿ ಟೈಪ್ ಮಾಡಿರುತ್ತಾರೆ.

ಆರೋಪಿ ನನಗೆ ಯಾವುದೇ ರೀತಿಯಲ್ಲಿ ತೊಂದಿರೆ ನೀಡಿಲ್ಲ ಅಂದರೆ ಸರಿಯಲ್ಲ. ಆರೋಪಿ ಅವಾಚ್ಯ ಶಬ್ದಗಳನ್ನು ಉಪಯೋಗಿಸಿಲ್ಲ ಮತ್ತು ಬೈದಿಲ್ಲ ಅಂದರೆ ಸರಿಯಲ್ಲ. ಆರೋಪಿ ನನಗೆ ಮಾನಸಿಸಿಕವಾಗಿ ಅಥವಾ ದೈಹಿಕವಾಗಿ ಹಿಂಸೆ ನೀಡಿಲ್ಲ ಅಂದರೆ ಸರಿಯಲ್ಲ. ಆರೋಪಿ ಯಾವುದೇ ಸ್ನೇಹಿತಿರನ್ನು ಮನೆಗೆ ಕರೆದುಕೊಂಡು ಬಂದಿಲ್ಲ ಮತ್ತು ನನ್ನೊಂದಿಗೆ ಅಸಭ್ಯವಾಗಿ ವರ್ತನೆ ಮಾಡಿಲ್ಲ ಅಂದರೆ ಸರಿಯಲ್ಲ. ಆತ ನನ್ನ ತಾಯಿಗಾಗಲೀ ಮತ್ತು ಅಕ್ಕಳಿಗಾಗಲೀ ಬೈದಿಲ್ಲ ಅಂದರೆ ಸರಿಯಲ್ಲ. ಆರೋಪಿ ಇಂದಿಗೂ ಸಹ ನನ್ನೊಂದಿಗೆ ಜೀವನ ಮಾಡಲು ಆಸೆ ಪಡುತ್ತಾನೆ ಅಂದರೆ ಸರಿಯಲ್ಲ. ಆರೋಪಿ ಮತ್ತು ನನ್ನ ಮಧ್ಯದಲ್ಲಿ ಜಗಳ ಆಗಿಲ್ಲ ಮತ್ತು ಗಲಾಟೆ ಮಾಡಿಲ್ಲ ಅಂದರೆ ಸರಿಯಲ್ಲ. ದೂರಿನಲ್ಲಿರುವ ಅಂಶಗಳ ಬಗ್ಗೆ ಮಾಹಿತಿಯೇ ಇಲ್ಲ ಅಂದರೆ ಸರಿಯಲ್ಲ. ಪೋಲಿಸರು ನನ್ನ ಸಮಕ್ಷಮ ಯಾವುದೇ  ಪಂಚನಾಮೆ ಮಾಡಿಲ್ಲ ಅಂದರೆ ಸರಿಯಲ್ಲ. ನಮಗೆ ಬೇಕಾದ ಹಾಗೇ ಸಾಕ್ಷಿದಾರರನ್ನು ಪ್ರಕರಣದಲ್ಲಿ ಸೇರಿಸಿರುತ್ತೇವೆ ಅಂದರೆ ಸರಿಯಲ್ಲ. ನಾನು ಯಾವುದೇ ಹೇಳಿಕೆ ನೀಡಿಲ್ಲ ಅಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪು ಮಾಡದಿದ್ದರು ಆತನಿಗೆ ತೊಂದರೆ ನೀಡಲು ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಅಂದರೆ ಸರಿಯಲ್ಲ. ಆರೋಪಿಯೊಂದಿಗೆ ಸಂಸಾರ ನಡೆಸಲು ಇಷ್ಟಇಲ್ಲದೆ ಆತನನ್ನು ದೂರ ಇಡುವ ಉದ್ದೇಶದಿಂದ ಸುಳ್ಳು ಆರೋಪಗಳನ್ನು ಮಾಡುತ್ತಿದ್ದೇನೆ ಅಂದರೆ ಸರಿಯಲ್ಲ.

**(**ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)**

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ವಿಜಯನಗರ ಜಿಲ್ಲೆ, ಹೊಸಪೇಟೆ.